ಡಾ. ಭವಾನಿ ಬೆಳವಾಡಿ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಬಯೊಕೆಮಿಸ್ಟ್ರಿ ವಿಭಾಗದ ಪ್ರಥಮ ಹಾಗೂ ಏಕೈಕ ಮುಖ್ಯಸ್ಥೆ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರಥಮ ಮಹಿಳಾ ವಿಜ್ಞಾನಿ ಡಾ. ಎಚ್.ಎಸ್. ಸಾವಿತ್ರಿ, 300ಕ್ಕೂ ಹೆಚ್ಚು ಮನೋವಿಜ್ಞಾನದ ಪ್ರೌಢ ಪ್ರಬಂಧಗಳನ್ನು ಪ್ರಕಟಿಸಿ ನಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಪ್ರತಿಮಾ ಮೂರ್ತಿ, ಅಲಹಾಬಾದ್ ವಿವಿಯಿಂದ ಪ್ರಾಣಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದು ಹೆಚ್ಚಿನ ಸಂಶೋಧನೆಗಾಗಿ ಜಪಾನ್, ಜರ್ಮನಿ, ಕೊರಿಯ, ಅಮೆರಿಕ ಮತ್ತು ಮಲೇಷ್ಯಾ ದೇಶಗಳಿಗೆ ಏಕಾಂಗಿಯಾಗಿ ಪ್ರಯಾಣಿಸಿದ ಡಾ. ಎ.ಆರ್. ಕಸ್ತೂರಿಬಾಯಿ, ಪಲ್ಸ್ ಪ್ರೊಟೀನ್‌ಗಳ ಕುರಿತು ಸಂಶೋಧನೆ ಮಾಡಿ ಕೇಂಬ್ರಿಡ್ಜ್ ವಿವಿಯಿಂದ ಪಿಎಚ್.ಡಿ ಪಡೆದ ಪ್ರಪ್ರಥಮ ಭಾರತೀಯ ಮಹಿಳೆ ಕಮಲ ಭಾಗವತ್, ಕಂಪ್ಯೂಟರ್ ವಿಜ್ಞಾನಿ ರೋಹಿಣಿ ಕೇಶವನ್ ಶ್ರೀಹರಿ, ಇಸ್ರೋ ಸಂಸ್ಥೆಯ ಮಂಗಳಯಾನ ಹಾಗೂ ಆಸ್ಟ್ರೋಸ್ಯಾಟ್ ಯೋಜನೆಯಲ್ಲಿ ಕೆಲಸ ಮಾಡಿರುವ ವಿಜ್ಞಾನಿ ನಂದಿನಿ ಹರಿನಾಥ್, ಸಿಟಿ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್‌ನಲ್ಲಿ ಕ್ವಾಂಟಮ್ ಕೆಮಿಸ್ಟ್ರಿ ವಿಷಯದಲ್ಲಿ ಪಿಎಚ್.ಡಿ ಗಳಿಸಿದ ಜೈವಿಕ ಭೌತವಿಜ್ಞಾನಿ ಸರಸ್ವತಿ ವಿಶ್ವೇಶ್ವರ, ಖಗೋಳ ತಜ್ಞೆ ಬಿ.ಎಸ್. ಶೈಲಜಾ, ಏರೊಸ್ಪೇಸ್ ವಿಜ್ಞಾನಿ ನೇಮಿಚಂದ್ರ, ಡೆವಲಪ್‌ಮೆಂಟಲ್ ಬಯಾಲಜಿಸ್ಟ್ ಎಲ್.ಎಸ್. ಶಶಿಧರ, ಓಎನ್‌ಜಿಸಿ ಸ್ಥಾಪನೆಯ ರೂವಾರಿಗಳಲ್ಲೊಬ್ಬರಾದ ಭೂ ಭೌತ ವಿಜ್ಞಾನಿ ಮಂಡಗೆರೆ ಭಾರದ್ವಾಜ ರಾಮಚಂದ್ರರಾವ್, ಪ್ರಾಣಿ ವಿಜ್ಞಾನ ತಜ್ಞೆ ಕ್ಯಾಸಂಬಳ್ಳಿಯ ಡಾ. ಶಕುಂತಲಾ ಶ್ರೀಧರ್, ಇಸ್ರೋದಲ್ಲಿ ವಿಜ್ಞಾನಿಗಳಾಗಿರುವ ಉತ್ತರ ಕನ್ನಡ ಜಿಲ್ಲೆಯ ಪ್ರಮೋದಾ ಹೆಗಡೆ, ಬಾಳೆಹೊನ್ನೂರಿನ ಡಾ. ಕೆ. ನಂದಿನಿ, ವಿಜಯನಗರ ಜಿಲ್ಲೆಯ ಡಾ. ಬಿ.ಎಚ್.ಎಂ. ದಾರುಕೇಶ, ವಿಜಯಪುರದ ಅಭಿಷೇಕ್ ದೇಶಪಾಂಡೆ – ಹೀಗೆ ಕರ್ನಾಟಕದ ವಿಜ್ಞಾನಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಅಪ್ರತಿಮ ಲೇಖಕರಾಗಿದ್ದು ಸಸ್ಯಗಳ ಅಂಗರಚನೆ, ಬಾಹ್ಯ ರಚನೆ, ವರ್ಗೀಕರಣ ಮತ್ತು ಭ್ರೂಣ ವಿಜ್ಞಾನಗಳ ಬಗ್ಗೆ ತಳಸ್ಪರ್ಶಿ ಅಧ್ಯಯನ ಮಾಡಿ, ಸಸ್ಯವಿಜ್ಞಾನದ ಅನೇಕ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯ ಮತ್ತು ವಿಜ್ಞಾನ ಕ್ಷೇತ್ರ ಎರಡನ್ನೂ ಶ್ರೀಮಂತಗೊಳಿಸಿದ ಬಿ.ಜಿ.ಎಲ್. ಸ್ವಾಮಿ, ಏರೊ ಸ್ಪೇಸ್ ಎಂಜಿನಿಯರಿಂಗ್‌ನಲ್ಲಿ ವಿಶ್ವಮಟ್ಟದ ಸಂಶೋಧನೆ ನಡೆಸಿದ ರೊದ್ದಂ ನರಸಿಂಹ, ಗಣಿತವನ್ನು ಸುಲಭವಾಗಿ ಕಲಿಯಲು ಗಣಿತದ ಆಟಗಳನ್ನು ರೂಪಿಸಿ ಗಣಿತ ಪಾರ್ಕ್ ಸ್ಥಾಪಿಸಿ ಅದನ್ನು ಜನಪ್ರಿಯಗೊಳಿಸುತ್ತಿರುವ ವಿ.ಎಸ್.ಎಸ್. ಶಾಸ್ತ್ರಿ, ಹೊಗೆರಹಿತ ಅಸ್ತ್ರ ಒಲೆ ಕಂಡುಹಿಡಿದ ಅಮೂಲ್ಯ ರೆಡ್ಡಿ ಮತ್ತು ಇನ್ನೂ ಅನೇಕರು ಕನ್ನಡ ನಾಡು ಕಂಡ ವಿಜ್ಞಾನದ ಕಲಿಗಳು.

ಬೆಂಗಳೂರಿನಲ್ಲಿ ಇಂಡೊ ಅಮೆರಿಕನ್ ಹೈಬ್ರಿಡ್ ಸೀಡ್ಸ್ ಕಂಪನಿ ಸ್ಥಾಪಿಸಿದ, ಹೈಬ್ರಿಡ್ ಟೊಮ್ಯಾಟೊ ತಳಿಗಳನ್ನು ಉತ್ಪಾದಿಸಿದ ಡಾ. ಮನಮೋಹನ್ ಮುತ್ತಪ್ಪ ಅತ್ತಾವರ್, ವಿವಿಧ ರಾಗಿ ತಳಿಗಳನ್ನು ಕಂಡುಹಿಡಿದು ರೈತರ ಬದುಕನ್ನು ಹಸನುಗೊಳಿಸಿದ ರಾಗಿ ಲಕ್ಷ್ಮಣಯ್ಯ, ಬೆಳೆಗಳಿಗೆ ತಗಲುವ ಕೀಟಗಳ ನಿಯಂತ್ರಣಕ್ಕೆ ನಾಲ್ಕು ದಶಕಗಳ ಕಾಲ ಯಶಸ್ವಿ ಸಂಶೋಧನೆ ನಡೆಸಿದ ಕೀಟ ವಿಜ್ಞಾನಿ ಎಂ. ಪುಟ್ಟರುದ್ರಯ್ಯ, ಅಡಿಕೆ ಬೆಳೆಗೆ ತಗಲುವ ಕೊಳೆ ರೋಗದ ಮೂಲ ಮತ್ತು ಪರಿಹಾರ ಕ್ರಮಗಳ ಸಂಶೋಧನೆ ನಡೆಸಿದ ರಾಮಚಂದ್ರ ಕುಪ್ಪಯ್ಯ ಹೆಗ್ಡೆ, ಬೀಜ ಮೊಳಕೆಗೆ ಮುನ್ನ ಕಾಳುಗಳ ಮೇಲೆ ವಾತಾವರಣದ ಪ್ರಭಾವ ಮತ್ತು ಮಾಡಬೇಕಾದ ಆರೈಕೆಯ ಕುರಿತು ಸಂಶೋಧನೆ ನಡೆಸಿದ ಕೃಷಿ ವಿಜ್ಞಾನಿ ಡಾ. ಹನುಮಪ್ಪ ರಾಮಪ್ಪ ಅರಕೇರಿ, ಕರ್ನಾಟಕದ ವಿವಿಧ ಮಣ್ಣಿನ ಮಾದರಿಗಳ ಕುರಿತು ಆಳವಾದ ಅಧ್ಯಯನ ಮಾಡಿದ್ದ ಬಿ.ವಿ. ವೆಂಕಟರಾವ್, ವರಲಕ್ಷ್ಮಿ ಹತ್ತಿ ತಳಿ ರೂಪಿಸಿದ ಕಾತರಕಿ – ಇವರೆಲ್ಲ ಭಾರತದ ಮತ್ತು ಕರ್ನಾಟಕದ ರೈತರ ಬದುಕನ್ನು ಹಸನುಗೊಳಿಸಿದ ಕೃಷಿ ವಿಜ್ಞಾನಿಗಳು.

## ಕೊನೆಯ ಮಾತು

ಕಾಲಕ್ಕೆ ತಕ್ಕಂತೆ ವಿಜ್ಞಾನ ತಂತ್ರಜ್ಞಾನಗಳಲ್ಲಿ ಹೊಸ ಹೊಸ ಆವಿಷ್ಕಾರಗಳಾಗುತ್ತಿವೆ. ಕನ್ನಡ ನಾಡಿನ ಪ್ರತಿಭಾವಂತರು ಜನರ ಬದುಕನ್ನು ಸುಧಾರಿಸಲು ವಿನೂತನ ಅನ್ವೇಷಣೆಗಳಲ್ಲಿ ತೊಡಗುತ್ತಲೇ ಇದ್ದಾರೆ. ಅವರಿಗೆ ಬೇಕಾದ ಬಂಡವಾಳ, ಪ್ರಯೋಗಾಲಯ ಹಾಗೂ ಕೆಲಸ ಮಾಡುವ ವಾತಾವರಣ ನಿರ್ಮಿಸಿಕೊಟ್ಟರೆ ಸಾಕು, ಜಗತ್ತೇ ನಿಬ್ಬೆರಗಾಗುವ ಸಂಶೋಧನೆಗಳನ್ನು ಮಾಡುವ ಬುದ್ಧಿ–ಮನಸ್ಸುಗಳು ನಮ್ಮಲ್ಲಿವೆ. ಅವರಿಗೆ ಅವಕಾಶ ಕಲ್ಪಿಸುವುದು ಸರ್ಕಾರ ಹಾಗೂ ಸಮಾಜದ ಹೊಣೆ ಮತ್ತು ಕರ್ತವ್ಯ.


ಚಿತ್ರಗಳು: ವಿಕಿಪೀಡಿಯಾ

ಪ್ರತಿಕ್ರಿಯಿಸಿ: feedback@sudha.co.in

### ಕಾಳಪ್ಪ ಮುನಿಯಪ್ಪ

ಜೀನ್ (ವಂಶವಾಹಿ) ಕ್ರೊಮ್ಯಾಟೈಜೇಷನ್ ಮತ್ತು ಜೀನ್ ಟಾರ್ಗೆಟಿಂಗ್ ವಿಷಯಗಳ ಸಂಶೋಧನೆಯಲ್ಲಿ ದೊಡ್ಡ ಹೆಸರು ಮಾಡಿರುವ ಕಾಳಪ್ಪ ಮುನಿಯಪ್ಪನವರು ಜನಿಸಿದ್ದು ಮೈಸೂರಿನಲ್ಲಿ. ಮೈಸೂರು ವಿಶ್ವವಿದ್ಯಾಲಯ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಗಳಲ್ಲಿ ಅಧ್ಯಯನ ಕೈಗೊಂಡ ಮುನಿಯಪ್ಪನವರು ಜಾರ್ಜಿಯ ವಿಶ್ವವಿದ್ಯಾಲಯ ಮತ್ತು ಯೇಲ್ ವಿವಿಯ ಸ್ಕೂಲ್ ಆಫ್ ಮೆಡಿಸಿನ್‌ನಲ್ಲಿ ಉನ್ನತ ಸಂಶೋಧನೆ ಕೈಗೊಂಡರು. ಮಾಲೆಕ್ಯುಲರ್ ಬೇಸಿಸ್ ಆಫ್ ಹೋಮೊಲಗಸ್ ಜೆನೆಟಿಕ್ ರಿಕಾಂಬಿನೇಷನ್ ವಿಷಯದ ತಜ್ಞರಾಗಿರುವ ಇವರಿಗೆ ಶಾಂತಿ ಸ್ವರೂಪ್ ಭಟ್ನಾಗರ್ ಬಹುಮಾನ ಸಂದಿದೆ. ಪ್ರತಿಷ್ಠಿತ 'ಯಮಾಗಿವ' ಇಂಟರ್‌ನ್ಯಾಷನಲ್ ಕ್ಯಾನ್ಸರ್ ಫೆಲೋಶಿಪ್, ಎಸಿಎಸ್ ಎಲೆನಾರ್ ರೂಸ್ ವೆಲ್ಟ್ ಬಹುಮಾನ ಗೌರವಗಳಿಗೆ ಪಾತ್ರರಾಗಿದ್ದಾರೆ.

### ಸುಜಾತ ರಾಮ್‌ದೊರೈ



ಗಣಿತದ ವಿನೂತನ 'ಇವಸವ' ಸಿದ್ಧಾಂತವನ್ನು ಮಂಡಿಸಿದ ಗಣಿತಜ್ಞೆ ಸುಜಾತ ರಾಮ್‌ದೊರೈ ಜನಿಸಿದ್ದು ಬೆಂಗಳೂರಿನಲ್ಲಿ. ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಬಿಎಸ್ಸಿ, ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಕರೆಸ್ಪಾಂಡೆನ್ಸ್ ಮಾದರಿಯಲ್ಲಿ ಗಣಿತದ ಎಂಎಸ್ಸಿ ಪದವಿ ಪಡೆದರು. ಪಿಎಚ್‌ಡಿ ಅಧ್ಯಯನಕ್ಕಾಗಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆ ಸೇರಿಕೊಂಡು, ರಾಮನ್ ಪರಿಮಳ ಅವರ ಮಾರ್ಗದರ್ಶನದಲ್ಲಿ ಪಿಎಚ್‌ಡಿ ಪದವಿಯನ್ನು ಸಂಪಾದಿಸಿದರು. 'ವಿಟ್ ಗ್ರೂಪ್ಸ್ ಆಫ್ ರಿಯಲ್ ಸರ್ಫೇಸಸ್ ಅಂಡ್ ರಿಯಲ್ ಜಾಮಿಟ್ರಿ' ಪ್ರೌಢ ಪ್ರಬಂಧ ಬರೆದು, ಜಪಾನ್ ದೇಶದ ಶ್ರೇಷ್ಠ ಗಣಿತಜ್ಞ ಕೆಂಕಿಚಿ 'ಇವಸವ' ರೂಪಿಸಿದ ಸಿದ್ಧಾಂತದ ಮೇಲೆ ಸುಜಾತ ಹೆಚ್ಚಿನ ಕೆಲಸ ಮಾಡಿದ್ದಾರೆ.

ಬೀಜಗಣಿತದ ಸಿದ್ಧಾಂತಗಳ ಮೇಲೆ ಹೆಚ್ಚು ಕೆಲಸ ಮಾಡುತ್ತಿದ್ದ ಇವರು ಆಸ್ಟ್ರೇಲಿಯಾದ ಗಣಿತಜ್ಞ ಕೋಟ್ಸ್, ಜಪಾನ್‌ನ ಕಾಟೊ, ಫುಕಾಯ ಅವರೊಂದಿಗೆ ಸೇರಿ ಇವಸವ ಸಿದ್ಧಾಂತದ ಹೊಸ ಮಾದರಿಯೊಂದನ್ನು ನಿರೂಪಿಸಿದರು. ಈಗ ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿವಿಯ ಸಂಶೋಧನಾ ವಿಭಾಗದ ಮುಖ್ಯಸ್ಥೆಯಾಗಿರುವ ಸುಜಾತ, ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್‌ನ ಅರೆಕಾಲಿಕ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಶಾಂತಿ ಸ್ವರೂಪ್ ಭಟ್ನಾಗರ್ ಬಹುಮಾನ, ಪದ್ಮಶ್ರೀ ಪ್ರಶಸ್ತಿ, ಇಟಲಿಯ ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಥಿಯರಿಟಿಕಲ್ ಫಿಸಿಕ್ಸ್ ನೀಡುವ 2006ರ ಐಸಿಟಿಪಿ ರಾಮಾನುಜನ್ ಬಹುಮಾನ, ಅಲೆಕ್ಸಾಂಡರ್ ವಾನ್ ಹಂಬೋಲ್ಟ್ ಫೆಲೊ ಗೌರವ ಸುಜಾತ ಅವರಿಗೆ ಸಂದಿವೆ.